**ಅಪರ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಹುನಗುಂದ ಇವರ ನ್ಯಾಯಾಲಯದಲ್ಲಿ**
**ಕ್ರಿಮಿನಲ್ ಮೊಕದ್ದಮೆ ನಂಃ 673/2020**

ಸಿ.ಡಬ್ಲ್ಯೂ-2 ಪಿ.ಡಬ್ಲ್ಯೂ- 3

ಸಾಕ್ಷಿಯ ಹೆಸರು ಃ ಸುರೇಶ ಮೇಟಿ

ತಂದೆಯ ಹೆಸರು ಃ ಮಲ್ಲಪ್ಪ

ವಯಸ್ಸು ಃ **55** ವರ್ಷ

ಉದ್ಯೋಗ ಃ ಒಕ್ಕಲುತನ

ವಾಸಸ್ಥಳ ಃ ಹಳ್ಳೂರ

ದಿನಾಂಕಃ 06-03-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಸಅ ರವರಿಂದಃ

ದಿ.19-08-2020 ರಂದು ನನ್ನ ಹಾಗೂ ಚಾಸಾ-3 ರ ಸಮಕ್ಷಮ ಅಮೀನಗಡ ಸರ್ಕಾರಿ ಆಸ್ಪತ್ರೆಯಲ್ಲಿ ಮೈತ ಮಹಾರುದ್ರಪ್ಪ ಬಡಿಗೇರ ಇವರ ಶವ ಪಂಚನಾಮೆಯನ್ನು ಮಾಡಿರುತ್ತಾರೆ. ಅದೇ ದಿನ ಪಿ.ಎಸ್.ಐ. ಅವರು ರಸ್ತೆಯಲ್ಲಿ ಪಂಚನಾಮೆ ಮಾಡಿ, ನಮ್ಮ ಸಹಿಯನ್ನು ಪಡೆದರು.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿಯನ್ನು ಕೋರಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ದಾಖಲೆಗಳನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸಸಅ ರವರಿಂದಃ

ದಿ.20-08-2020 ರಂದು ನನ್ನ ಹಾಗೂ ಚಾಸಾ-3 ರ ಸಮಕ್ಷಮ ಕಮತಗಿ ಕ್ರಾಸ ಭಾರತ ಗ್ಯಾಸ ಹತ್ತಿರ ಗುನ್ಹಾ ಜಾಗ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಆ ಕಾಲಕ್ಕೆ ಕೆಎ 29 ಕ್ಯೂ 2828 ಹೊಂಡಾ ಶೈನ ವಾಹನವನ್ನು ತಡೆಹಿಡಿದು ಛಾಯಾ ಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿ.

ನಾನು ಈಗ ಒಂದು ಶವ ಪಂಚನಾಮೆಯನ್ನು ನೋಡಿದ್ದು ಅದನು ನಿಪಿ-9 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿ ನನ್ನದೇ ಅದನು ನಿಪಿ-9(ಎ) ಎಂದು ಗುರುತಿಸಲಾಯಿತು. ನಾನು ಈಗ ಒಂದು ಗುನ್ಹಾ ಪಂಚನಾಮೆಯನ್ನು ನೋಡಿದ್ದು ಅದನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿ ನನ್ನದೇ ಅದನ್ನು ಈಗ ನಿಪಿ-8(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀಸವಾಲುಃ ಆರೋಪಿ ಪರ ಶ್ರೀ. ಎಸ್.ವ್ಹಿ.ಎಲ್. ವಕೀಲರಿಂದ ಃ

ನಮ್ಮ ಊರಿನಿಂದ ಅಪಘಾತದ ಸ್ಥಳಕ್ಕೆ 13 ಕಿ.ಮೀ. ಅಂತರ ಇದೆ. ನಾವು ಘಟನಾ ಸ್ಥಳಕ್ಕೆ ನಮ್ಮ ಊರಿನಿಂದ ಅರ್ದ ಗಂಟೆಯಲ್ಲಿ ಬಂದಿರುತ್ತೇವೆ. ನನಗೆ ಘಟನಾ ಸ್ಥಳದ ಚೆಕ್ ಬಂದಿ ಹೇಳಲು ಬರುವುದಿಲ್ಲ. ನಾವು ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿ ಅಲ್ಲ. ಪಿರ್ಯಾದಿದಾರರಿಗೆ ಅನುಕೂಲವಾಗುವಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ

## ಅಪರ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಹುನಗುಂದ ಇವರ ನ್ಯಾಯಾಲಯದಲ್ಲಿ

**ಕ್ರಿಮಿನಲ್ ಮೊಕದ್ದಮೆ ನಂಃ 673/2020**

ಸಿ.ಡಬ್ಲ್ಯೂ-4 ಪಿ.ಡಬ್ಲ್ಯೂ- 4

ಸಾಕ್ಷಿಯ ಹೆಸರು ಃ ಬಸವರಾಜ ಕೊಟ್ನಳ್ಳಿ

ತಂದೆಯ ಹೆಸರು ಃ ಕಲ್ಲಪ್ಪ

ವಯಸ್ಸು ಃ **38** ವರ್ಷ

ಉದ್ಯೋಗ ಃ ಕೂಲಿ

ವಾಸಸ್ಥಳ ಃ ಹಳ್ಳೂರ

ದಿನಾಂಕಃ 06-03-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಸಅ ರವರಿಂದಃ

ಚಾಸಾ-1 ನಮ್ಮ ಊರಿನವರು. ಮೃತ ಮಹಾರುದ್ರಪ್ಪ ನನಗೆ ಪರಿಚಯ ಇರುತ್ತಾರೆ. ದಿ.19-08-2020 ರಂದು ನಾನು ವಾಹನಕ್ಕೆ ಎಚ್ ಪಿ ಪೆಟ್ರೋಲ್ ಬಂಕ್ ಅಲ್ಲಿ ಪೆಟ್ರೋಲ್ ಹಾಕಿಸಿ ಮುಂದೆ ಹೊರಟಿದ್ದೆ. ನಮ್ಮನ್ನು ಒವರ್ ಟೇಕ್ ಮಾಡಿ ಮುಂದೆ ಆರೋಪಿತರು ಅತೀ ಜೋರಾಗಿ ತಾವಾಗೇ ಬಿದ್ದು ಸ್ಥಳದಲ್ಲಿಯೇ ನಾನು ಹೋಗಿ ನೋಡಿದಾಗ ದಿಗಂಬರನಿಗೆ ಸ್ವಲ್ಪ ಗಾಯವಾಗಿರುತ್ತು ಮತ್ತು ಮಹಾರುದ್ರಪ್ಪ ಸ್ಥಳದಲ್ಲಿಯೇ ಮೃತನಾಗಿದ್ದ. ಆಗ ನಾನು ಚಾಸಾ-1 ರವರಿಗೆ ಕರೆ ಮಾಡಿ ,ಸದರಿ ಅಪಘಾತದ ಬಗ್ಗೆ ತಿಳಿಸಿದೆ. ಸದರಿ ಗಾಡಿ ಸಂಖ್ಯೆ ಕೆಎ 29 ಕ್ಯೂ 2828 ಆಗಿರುತ್ತದೆ. ವಾಹನ ಚಾಲನ ಹೆಸರು ದಿಗಂಬರ ಕೊಪ್ಪಳ ಎಂದು ಗೊತ್ತಾಯಿತು. ಸದರಿ ದಿಗಂಬರ ಕೊಪ್ಪಳ ಅವರಿಂದ ಆಗಿರುತ್ತದೆ. ಈ ರೀತಿ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ಆರೋಪಿತಯನ್ನು ನೋಡಿದರೆ ಗುರುತಿಸುತ್ತೇನೆಂದು ಹೇಳಿರುತ್ತಾರೆ.

ಪಾಟೀಸವಾಲುಃ ಆರೋಪಿ ಪರ ಶ್ರೀ. ಎಸ್.ವ್ಹಿ.ಎಲ್. ವಕೀಲರಿಂದ ಃ

ನಾನು ಅಪಘಾತದ ದಿನ ಕಮತಗಿಯಿಂದ ಬಾಗಲಕೋಟೆಗೆ ಹೊರಟಿದ್ದೇನು. ನಾನು ಕಮತಗಿ ಬಿಟ್ಟಾಗ ಸುಮಾರು 12.30 ರಿಂದ 1.00 ಆಗಿತ್ತು. ಅಪಘಾತವಾಗದ ನಿರ್ದಿಷ್ಟ ಸಮಯ ನನಗೆ ಗೊತ್ತಿಲ್ಲ. ಅಂದಾಜು 12.30 ಯಿಂದ 01.00 ಆಗಿತ್ತು ಎಂದು ನುಡಿಯುತ್ತಾರೆ. ಆರೋಪಿ ನನ್ನನ್ನು ಒವರ್ ಟೇಕ್ ಮಾಡಿ 1 ಕಿ.ಮೀ ಅಂತರ ಇತ್ತು. ಸದರಿ 1.30 ಕಿ.ಮೀ ಅಂತರ ಇದ್ದರು ಸಹ ನಾನು ಬಿದ್ದುದನ್ನು ನಾನು ನೋಡಿರುತ್ತೇನೆ. ಅಪಘಾತ ಹೇಗೆ ಆಯಿತು ಎಂದರೆ ನನಗೆ ಗೊತ್ತಿಲ್ಲ. ಆದರೆ ಅಲ್ಲಿ ಸ್ಪೀಡ್ ಬ್ರೇಕರ್ ಇತ್ತು ಅದರಿಂದ ಆಗಿರಬಹುದು ಎಂದು ನುಡಿಯುತ್ತಾರೆ. ಹಿಂಬದಿಯ ಸವಾರ ಕುಡಿದಿದ್ದರಿಂದ ಪುಟಿದು ಹಿಂದುಗಡೆ ಬಿದ್ದು ಮೃತರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತವನ್ನು ನಾನು ನೋಡಿಲ್ಲ ಎಂದರೆ ಸರಿ ಅಲ್ಲ. ಪಿರ್ಯಾದಿಗೆ ಅನುಕೂಲವಾಗುವಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ

## ಅಪರ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಹುನಗುಂದ ಇವರ ನ್ಯಾಯಾಲಯದಲ್ಲಿ

**ಕ್ರಿಮಿನಲ್ ಮೊಕದ್ದಮೆ ನಂಃ 673/2020**

ಸಿ.ಡಬ್ಲ್ಯೂ-5 ಪಿ.ಡಬ್ಲ್ಯೂ- 5

ಸಾಕ್ಷಿಯ ಹೆಸರು ಃ ಈರಣ್ಣ ಕುಂಬಾರ

ತಂದೆಯ ಹೆಸರು ಃ ಅಯ್ಯಪ್ಪ

ವಯಸ್ಸು ಃ **53** ವರ್ಷ

ಉದ್ಯೋಗ ಃ ಒಕ್ಕಲುತನ

ವಾಸಸ್ಥಳ ಃ ಹಳ್ಳೂರ

ದಿನಾಂಕಃ 06-03-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಸಅ ರವರಿಂದಃ

ಚಾಸಾ-1 ನನಗೆ ಪರಿಚಯ ಇರುತ್ತಾರೆ. ಮೃತ ಮಹಾರುದ್ರಪ್ಪ ನನಗೆ ಪರಿಚಯ ಇರುತ್ತಾರೆ. ಚಾಸಾ-1 ರವರು ಹೇಳಿದಂತೆ ಪಿರ್ಯಾದಿಯನ್ನು ಬರೆದಿರುತ್ತೇನೆ. ದಿ. 19-08-2020 ರಂದು ಚಾಸಾ-1 ಮತ್ತು 7 ರವರು ಸದರಿ ಅಪಘಾತದ ವಿಷಯ ತಿಳಿಸಿ ನನಗೆ ಕರೆದುಕೊಂಡು ಹೋದರು.

ನಾನು ಈಗ ಒಂದು ಪಿರ್ಯಾದಿಯನ್ನು ನೋಡಿದ್ದು ಅದನು ಈಗಾಗಲೇ ನಿಪಿ-1 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿ ನನ್ನದೇ ಅದನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ಶ್ರೀ. ಎಸ್.ವ್ಹಿ.ಎಲ್. ವಕೀಲರಿಂದ ಃ

ನಾನು ಎಸ್.ಎಸ್. ಎಲ್.ಸಿ. ವರೆಗೂ ಶಾಲೆ ಕಲೆತಿರುತ್ತೇನೆ. ನಮ್ಮ ಊರಿನಿಂದ ಅಮೀನಗಡ ಠಾಣೆ ಸುಮಾರು 28 ಕಿ.ಮೀ. ಅಂತರ ಇದೆ. ಸಾಯಂಕಾಲ 5.30 ಯಿಂದ 6.00 ಗಂಟೆಗೆ ನಾವು ಮೊದಲು ಘಟನಾ ಸ್ಥಳಕ್ಕೆ ಹೋಗಿ ನಂತರ ಠಾಣೆಗೆ ಬಂದಿರುತ್ತೇವೆ. ಚಾಸಾ-1 ರವರು ಹೇಳಿದಂತೆ ನಾನು ಪಿರ್ಯಾದಿಯನ್ನು ಬರೆದಿರುತ್ತೇನೆ. ಪಿರ್ಯಾದಿಯನ್ನು ನಾನು ಠಾಣೆಯಲ್ಲಿ ಬರೆದಿರುತ್ತೇನೆ. ಘಟನೆ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ ಅಲ್ಲ. ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

ಅಪರ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಹುನಗುಂದ